ಕೆ.ಎಂ. ಕೊಟ್ರಸ್ವಾಮಿ, ಸಂಡೂರು
ಪಾಕ್ ನರಿಬುದ್ಧಿ ಬಿಡುವುದೇನು?



ಉಂಟೇ! ಅದು ಆ ದೇಶದ ಲಾಂಛನ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಇರುವುದರಲ್ಲೇ ತೃಪ್ತಿಯಿಂದಿರುವಂತೆ ಮಾಡು ದೇವರೇ ಎಂದು ಯಾರೂ ಕೇಳಿಕೊಳ್ಳದಿರುವ ಕಾರಣ?
ಕೇಳುವರಲ್ಲ. 'ನಮ್ಮ ದಾಯಾದಿಗಳು ಆಸ್ತಿ ಕೇಳದೆ' ಎಂದು ಸೇರಿಸಿ ಕೇಳುವರು.

ಅನಸೂಯಾ ಟಿ., ಕೇದಿಗೆಮನೆ
ಗೊತ್ತುಗುರಿ ಇಲ್ಲದೆ ಬದುಕಿದರೆ ಸುಖವಾಗಿರಬಹುದು ಅಲ್ಲವೆ?
'ಅಹುದಹುದು' ಎಂದವು ಹಸು, ಕುರಿ, ನಾಯಿ, ಚಿಟ್ಟೆ, ಮಂತ್ರಿಪುತ್ರ...

ಶ್ರೀನಿವಾಸ ಕೆ, ಬೆಂಗಳೂರು
ಓದಿನಲ್ಲಿ ಯಾವಾಗಲೂ ಹುಡುಗಿಯರೇ ಏಕೆ ಮುಂದು?



ಅವರು ಲೆಸನ್ ಫಾಲೋ ಮಾಡಿದರೆ ಸಾಕು. ಇವರು ಹುಡುಗಿಯರನ್ನೂ ಫಾಲೋ ಮಾಡಬೇಕಲ್ಲ.

ಮಹಾವೀರ ಕಾಸರ, ಶಿವಮೊಗ್ಗ
ಅನ್ಯ ಭಾಷಿಕರಿಗೆ ಕನ್ನಡ ಗೊತ್ತಿದ್ದೂ ಮಾತನಾಡುವುದಿಲ್ಲವಲ್ಲ?
ಆ ಅನಿವಾರ್ಯತೆ ಸಂಭವಿಸದಂತೆ ಕನ್ನಡಿಗರು ನೋಡಿಕೊಳ್ಳುತ್ತಾರಲ್ಲ.

ದಿನೇಶ್, ಗುಡ್ಡದೂರು
ಸರ್ಕಾರವು ಎಲ್ಲಾ ದಿನಾಚರಣೆಗಳನ್ನು ಆಚರಿಸುತ್ತದೆ. ಕುಡುಕರ ದಿನಾಚರಣೆ ಏಕಿಲ್ಲ?
ಅದು 'ರಾತ್ರಿ ಆಚರಣೆ' ಆದ್ದರಿಂದ.

ದುಂಡಪ್ಪ ನಂದೆನ್ನವರ, ಬೆಳಗಾವಿ
ನಾಣ್ಯಗಳು ಸದ್ದು ಮಾಡುತ್ತವೆ. ಆದರೆ ನೋಟುಗಳಲ್ಲ. ಏಕೆ?
Note worthy ಆಗಬೇಕಾದರೆ ಚಿಲ್ರೆಬುದ್ಧಿ ಬಿಡಬೇಕೆಂದು ನೋಟಿಗೆ ಗೊತ್ತು.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಕಠಿಣವಾದ ದಾರಿಗಳಲ್ಲಿ ಸುಂದರವಾದ ತಾಣಗಳನ್ನು ಕಾಣಲು ಸಾಧ್ಯವೆ?
ಅಲ್ಲೇ ಕಾಣಲು ಸಾಧ್ಯ. ಸುಲಭ ದಾರಿಯಲ್ಲಿನ ತಾಣಗಳೆಲ್ಲ ಮಲಿನತಾಣಗಳಾಗಿವೆ.

ಎಸ್ಸೆನ್ ಮಹಾಬಲರಾವ್, ಎನ್ನಾರ್ಪುರ
ಕುಡಿದ ಮೇಲೆ ಕಡ್ಡಿ ಗೀರಲಾಗುತ್ತಿಲ್ಲ...?
ಈಗಲೂ ಎಚ್ಚೆತ್ತುಕೊಳ್ಳದಿದ್ದರೆ ಆತ್ಮೀಯರು ಕೊಳ್ಳಿ ಹಿಡಿಯುವ ಕಾಲ ಸನಿಹವಂತೆ.

ಎಸ್. ಶರತ್, ಬೆಂಗಳೂರು
21600; ಈ ಸಂಖ್ಯೆಯ ಮಹತ್ವ ತಿಳಿಸುವಿರಾ?
ದಿನಕ್ಕೆ ಇಷ್ಟು ಸಲ ಉಸಿರಾಡಿದರೆ ಮನುಷ್ಯನು ಸ್ವಸ್ಥವಾಗಿದ್ದಾನೆ ಎಂದರ್ಥ.

ಎಂ.ಜಿ. ಉಮಾ, ಬಳ್ಳಾರಿ
ಅಕ್ಷರ ಅಕ್ಷರ ಸೇರಿದರೆ ಪದ. ಸುಳ್ಳು ಸುಳ್ಳು ಸೇರಿದರೆ?
ಚುನಾವಣೆ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
'ಹೆತ್ತ ತಂದೆತಾಯಿ' ಎನ್ನುತ್ತಾರೆ. ಅಪ್ಪ ಹೆರುವುದೇ ಇಲ್ಲವಲ್ಲಾ?
ಹೆರು=ಪಡೆ ಎಂಬರ್ಥವಿದೆ. ತಂದೆ–ತಾಯಿಯ ಪಡೆಯೇ ಅದಕ್ಕೆ ಕಾರಣವಲ್ಲವೆ!

ಬಿ. ಚಂದ್ರೇಗೌಡ, ಬೆಂಗಳೂರು
ಆಹಾರದ ಬುತ್ತಿಗೂ, ಜ್ಞಾನದ ಬುತ್ತಿಗೂ ಏನು ವ್ಯತ್ಯಾಸ?
ಈ ಬುತ್ತಿ ಹಸಿವನ್ನು ಹಿಂಗಿಸುತ್ತದೆ. ಆ ಬುತ್ತಿ (ಜ್ಞಾನದ) ಹಸಿವನ್ನು ಹೆಚ್ಚಿಸುತ್ತದೆ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಸಹವಾಸದಿಂದ ಸನ್ಯಾಸಿ ಕೆಟ್ಟ. ರಾಜಕೀಯದಿಂದ?
ಮಠಗಳೇ ಹಾಳಾಗಿಹೋದವು.


## ಬಹುಮಾನಿತ ಪ್ರಶ್ನೆ

ವಿ. ಹೇಮಂತಕುಮಾರ್, ಬೆಂಗಳೂರು
ಲೈಬ್ರರಿಯಲ್ಲಿ ಓದುವವರಿಗಿಂತ ತೂಕಡಿಸುವವರೇ ಹೆಚ್ಚಾಗಿ ಇರುತ್ತಾರಲ್ಲ?
ಬೋರ್ ಕೊರೆಯುವ ಪುಸ್ತಕಗಳ ಪ್ರಭಾವ.

ಖಾದ್ರಿ ಮಂಜುಳ, ದುಬೈ
'ಹಸು'ವಿನಂಥ ಮನಸ್ಸಿರುವ ಕನ್ನಡಿಗರದು 'ಕರು'ನಾಡು ಹೇಗೆ ರಾಂ?
ಕನ್ನಡಿಗರು ಕರುಗಳೇ ಬಾಲ'ಕರು', ಯುವ'ಕರು', ಮುದು'ಕರು'...

ಗೋಪಿ ವಿ., ಹಾರಗದ್ದೆ
ಮದ್ಯಪಾನೀಯಗಳ ಬೆಲೆ ಹೆಚ್ಚಾದರೂ ಪಾನಪ್ರಿಯರಿಗೆ ಯಾವ ಯೋಚನೆಯೂ ಇರುವುದಿಲ್ಲ?
ಇರುತ್ತದೆ. ಆ ಯೋಚನೆ ಮರೆಯಲೆಂದೇ ಅವರು ಮತ್ತೆ ಕುಡಿಯುತ್ತಾರೆ.

ಬಿ. ಬಸವರಾಜ್, ಹರಿಹರ
ಪ್ರೇಮಿಗಳು ಸತಿಪತಿ ಆಗುವುದು ಮೇಲೋ, ಸತಿಪತಿ ಪ್ರೇಮಿಗಳಾಗುವುದು ಮೇಲೋ?



ಹೀಗೇ ಆಗಲಿ, ಹಾಗೇ ಆಗಲಿ ಒಂದು ಮೇಲು ಒಂದು ಫೀಮೇಲು ಉತ್ತಮ.

ಕೆ.ವಿ. ಗೋವಿಂದಾಚಾರಿ, ಮೈಸೂರು
ಖ್ಯಾತ ವೈದ್ಯ, ಖ್ಯಾತ ಲೇಖಕ, ಖ್ಯಾತ ನಟ ಎನ್ನುತ್ತಾರೆ. ಖ್ಯಾತ ರಾಜಕಾರಣಿ ಎಂದೇಕೆ ಹೇಳರು?
ಸಂಚಿತ ಗುಣಫಲ. ಗಂಧ ಶ್ರೀಗಂಧ ಆಗುತ್ತದೆ; ತಿಪ್ಪೆ ಎಂದಿಗೂ ಶ್ರೀತಿಪ್ಪೆ ಆಗದು.

ಅಜ್ಜಯ್ಯಮೂರ್ತಿ, ಭಟ್ರಹಳ್ಳಿ
ಕೆಎಸ್ಆರ್‌ಟಿಸಿ ಬಸ್ಸನ್ನು ಎಂದೂ ಹತ್ತದ ಜನಪ್ರತಿನಿಧಿಗಳಿಗೆ ಆಸನ ಕಾಯ್ದಿರಿಸಿದ್ದಾರಲ್ಲಾ?
ಹ್ಞ! ಪಕ್ಷಾಧ್ಯಕ್ಷರ ಪಟ್ಟವನ್ನೇ ಕಾಯ್ದಿರಿಸುವಾಗ ಇದೇನು ಮಹಾ!

■ ರಾಮ್